OS No. 87/2022

PW-1

**(ಇಂದು ದಿಃ 12-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. SKD ವಕೀಲರಿಂದಃ-</u>**

ನನ್ನ ತಂದೆ ತೀರಿಹೋದ ದಿನಾಂಕ ಮತ್ತು ವರ್ಷ ಗೊತ್ತಿಲ್ಲ. ನನ್ನ ತಂದೆ ತೀರಿಹೋಗಿ ಸುಮಾರು 40 ವರ್ಷಕ್ಕಿಂತ ಹೆಚ್ಚಾಗಿದೆ. ನಾನು 10ನೇ ತರಗತಿ ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ಸಾಬಣ್ಣ ನನ್ನ ಅಣ್ಣ. ಪ್ರತಿವಾದಿಯರ ತಂದೆ ರಾಮಪ್ಪ ನಾನು ಮತ್ತು ಸಾಬಣ್ಣನಿಗಿಂತ ದೊಡ್ಡವರು. ಸಾಕ್ಷಿಗೆ ಒಂದು ಚುನಾವಣಾ ಗುರುತಿನ ಚೀಟಿ ತೋರಿಸಲಾಗಿ ಅದರಲ್ಲಿರುವುದು ರಾಮಪ್ಪ ಎಂದು ನೋಡಿ ಗುರುತಿಸಿದ್ದು ಸದರಿ ಗುರುತಿನ ಚೀಟಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಕುಟುಂಬ ಪಡಿತರ ಚೀಟಿ ತೋರಿಸಲಾಗಿ ಅದರಲ್ಲಿರುವ ಪೋಟ ರಾಮಪ್ಪನದು ಎಂದು ಗುರುತಿಸಿದ್ದು ಅದನ್ನು ನಿಡಿ-2 ಎಂದು ಗರುತಿಸಲಾಯಿತು. ನಾಗಪ್ಪ ರವರಿಗೆ ಸರ್ವೆ ನಂಬರ 60 ಮತ್ತು 20 ರಲ್ಲಿ ಜಮೀನುಗಳು ಇದ್ದವು. ಸರ್ವೆ ನಂಬರ 60 ರಲ್ಲಿ 2 ಎಕರೆ 2 ಗುಂಟೆ ಮತು ಸರ್ವೆ ನಂಬರ 20 ರಲ್ಲಿ ಸುಮಾರು 2 ಎಕರೆ ಜಮೀನು ಇತ್ತು. ನಾವು ಬೇರೆ ಆದ ದಿನಾಂಕ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ, ಮೌಖಿಕವಾಗಿ ಅಥವಾ ದಾಖಲಾತಿ ಮೂಲಕ ಬೇರೆಯಾಗಿದ್ದೆವೆ ಎಂದು ಹೇಳಿ ಬರೆಸಿಲ್ಲ. ನಾಗಪ್ಪ ಬದುಕಿದ್ದಾಗ ಸರ್ವೆ ನಂಬರ 60 ಮತ್ತು 20 ರ ಜಮೀನುಗಳು ಆತನ ಹೆಸರಿನಲ್ಲಿದ್ದವು. ಯಾವ ವರ್ಷ ನಮ್ಮ ಹೆಸರಿಗೆ ಪಹಣಿ ಬಂದವು ನನಗೆ ಗೊತಿಲ್ಲ, ಸಾಕ್ಷಿ ಮುಂದುವರೆದು ನನ್ನ ತಂದೆ ತೀರಿಹೋದ ನಂತರ ಬಂದಿವೆ ಎಂದು ಹೇಳುತ್ತಾರೆ. ಸರ್ವೆ ನಂಬರ 275 ಅನ್ನು 1983 ರಲ್ಲಿ ನಾನು ಖರೀದಿ ಮಾಡಿದ್ದೇನೆ. ರಾಮಪ್ಪನ ಹೆಸರಿಗೆ ಪಹಣಿಗಳು ಯಾವ ವರ್ಷದಿಂದ ಬಂದವು ಗೊತ್ತಿಲ್ಲ, ರಾಮಪ್ಪ ತೀರಿಹೋದ ದಿನಾಂಕ ಮತ್ತು ವರ್ಷ ಗೊತ್ತಿಲ್ಲ. ಸರ್ವೆ ನಂಬರ 283 ರ ಪೂರ್ವಕ್ಕೆ ಸರ್ವೆ ನಂಬರ 284 ಇದೆ. ಸರ್ವೆ ನಂಬರ 274 ರಲ್ಲಿ ಮೊಗಲಪ್ಪ, ರಾಮಪ್ಪ ಮತ್ತು ಸಾಬಣ್ಣನ ಮನೆಗಳು ಇವೆ ಎಂದರೆ ಸರಿ. ಸರ್ವೆ ನಂಬರ 274 ರ ದಕ್ಷಿಣಕ್ಕೆ ಸರ್ವೆ ನಂಬರ 275 ಇದೆ. ಸರ್ವೆ ನಂಬರ 283 ರ ದಕ್ಷಿಣಕ್ಕೆ ಸರ್ವೆ ನಂಬರ 282 ಇದೆ. ಸರ್ವೆ ನಂಬರ 283 ರ ಪೂರ್ವಕ್ಕೆ ಸರ್ವೆ ನಂಬರ 284 ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸರ್ವೆ ನಂಬರ 283 ರ ಪಶ್ಚಿಮಕ್ಕೆ ಸರ್ವೆ ನಂಬರ 284 ಇದೆ ಎಂದರೆ ಸರಿಯಲ್ಲ.

OS No. 87/2022

PW-1

ರಾಮಪ್ಪನ ತಾಯಿ ಹೆಸರು ನರಸಮ್ಮ, ನನ್ನ ತಾಯಿ ಹೆಸರು ಕೂಡ ನರಸಮ್ಮ, ನನ್ನ ತಾಯಿ ಮತ್ತು ರಾಮಪ್ಪನ ತಾಯಿ ಇಬ್ಬರು ಒಂದೇ. ನರಸಮ್ಮಳ ಮೊದಲನೆ ಗಂಡನ ಹೆಸರನ್ನು ನಾನು ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ, ನರಸಮ್ಮಳ ಗಂಡನ ಮೊದಲನೆ ಗಂಡನ ಹೆಸರು ನನಗೆ ಗೊತ್ತಿಲ. ನರಸಮ್ಮ ನನ್ನ ತಂದೆಯನ್ನು ಮದುವೆ ಆಗುವ ಮುಂಚೆ ಬೇರೆ ಮದುವೆ ಅಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಸಾಬಣ್ಣ ಮತ್ತು ರಾಮಪ್ಪ ನಾಗಪ್ಪ ಮತ್ತು ನರಸಮ್ಮ ರವರಿಗೆ ಜನಿಸಿದ್ದೇವೆ ಎಂದರೆ ಸರಿಯಲ್ಲ. ರಾಮಪ್ಪ ಬದುಕಿದ್ದಾಗ ಕುರಿಗಳನ್ನು ಸಾಕಿಕೊಂಡಿದ್ದ ಎಂದರೆ ಸರಿ. ನಾನು ಪಂಚಾಯತಿಯಲ್ಲಿ ಪಂಪ ಆಪರೇಟರ ಅಗಿ 1983 ದಿಂದ ಕೆಲಸ ಮಾಡುತ್ತಿದ್ದೆ. 2015 ರಲ್ಲಿ ನಿವೃತ್ತಿ ಹೊಂದಿದ್ದೇನೆ.

ಸರ್ವೆ ನಂಬರ 60 ರಲ್ಲಿ 2 ಎಕರೆ 2 ಗುಂಟೆ ರಾಮಪ್ಪ ತಂದೆ ನಾಗಪ್ಪನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಯಾವ ವರ್ಷ ಮಾಡಿಕೊಂಡಿದ್ದಾರೆ ನನಗೆ ಗೊತಿಲ್ಲ. ನನ್ನ ಹೆಸರಿಗೆ ಯಾವ ವರ್ಷ ಜಮೀನು ದಾಖಲಾಗಿದೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 274 ಮತ್ತು 275 ರ ಸಂಬಂಧ ಮುಟೇಷನ 44 ರ ಪ್ರಕಾರ ದಿಃ 05-01-1999 ರಂದು ರಾಮಪ್ಪ, ಮೊಗಲಪ್ಪ ಮತ್ತು ಸಾಬಣ್ಣನ ಹೆಸರಿಗೆ ಮುಟೇಷನ ಆಯಿತು ಎಂದರೆ ರಾಮಪ್ಪನ ಹೆಸರಿಗೆ ಆಗಿದ್ದು ನನಗೆ ಗೊತ್ತಿರಲಿಲ್ಲ ನಂತರ ಗೊತ್ತಾಗಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ 274 ರಲ್ಲಿ 1986-87 ರಲ್ಲಿ ಮನೆ ಕಟ್ಟಿದ್ದೇವೆ. ಭಾಗ ಆಗುವ ಮುಂಚೆ ಮನೆ ಕಟ್ಟಿಕೊಂಡಿದ್ದೇವೆ. ಸರ್ವೆ ನಂಬರ 274 ರಲ್ಲಿ 18 ಗುಂಟೆ ಜಮೀನು ಇದೆ ಎಂದರೆ ಸರಿ. ಅದರಲ್ಲಿ 3 ಜನರಿಗೆ ತಲಾ 6 ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಮತು ಸಾಬಣ್ಣನಿಗೆ ತಲಾ 9 ಗುಂಟೆ ಬಂದಿತ್ತು ನಂತರ ರಾಮಪ್ಪ ತನ್ನ ಹೆಸರಿಗೆ 6 ಗುಂಟೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಮುಟೇಷನಗಳನ್ನು ಪ್ರಶ್ನೀಸಿ ನಾನು ಕಂದಾಯ ಇಲಾಖೆಯಲ್ಲಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಸರ್ವೆ ನಂಬರ 274 ರ ಉತ್ತರಕ್ಕೆ ನನ್ನ ಮನೆ ಇದೆ ಎಂದರೆ ಸರಿ. ನನ್ನ ಮನೆ ದಕ್ಷಿಣಕ್ಕೆ ರಾಮಪ್ಪನ ಮನೆ ಇದೆ ಎಂದರೆ ಸರಿ. ಆ ಮನೆ ದಕ್ಷಿಣಕ್ಕೆ ಸಾಬಣ್ಣನ ಮನೆ ಇದೆ

ಎಂದರೆ ಸರಿ. ಸರ್ವೆ ನಂಬರ 274 ರಲ್ಲಿ ರಾಮಪ್ಪನ ಭಾಗಕ್ಕೆ ಬಂದಿದ್ದ 6 ಗುಂಟೆಯಲ್ಲಿ ಪ್ರತಿವಾದಿಯರು ಬೊರವೆಲ ಕೋರಿಸಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಬೊರವೇಲ ಕೋರಿಸಿದ್ದೇನೆ ಎಂದುಹೇಳುತ್ತಾರೆ. ನಾನು ಬೋರವೇಲ ಕೋರಿಸಿದ್ದೇನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸರ್ವೆ ನಂಬರ 274 ರ ದಕ್ಷಿಣಕ್ಕೆ ಸರ್ವೆ ನಂಬರ 275 ರಲ್ಲಿ ನನಗೆ ಸೇರಿದ 30 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ 283 ರ ದಕ್ಷಿಣಕ್ಕೆ ಸಾಬಣ್ಣನ ಸರ್ವೆ ನಂಬರ 282 ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬೇರೆಯವರ ಜಮೀನು ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ 282 ರ ಸಾಬಣ್ಣನ ಜಮೀನಿಗೆ ತಾಗಿಕೊಂಡು ಪಶ್ಚಿಮ ದಿಕ್ಕಿಗೆ ಕಿಷ್ಟಾರೆಡ್ಡಿ ರವರ ಜಮೀನು ಇದೆ ಎಂದರೆ ಸರಿಯಲ್ಲ, ಸರ್ವೆ ನಂಬರ 282 ಮತು ಸರ್ವೆ ನಂಬರ 275 ರ ದಕ್ಷಿಣಕ್ಕೆ ಮುಧೋಳ ಕೊಲಕುಂದಾ ರಸ್ತೆ ಇದೆ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**